ಶ್ರೀ ಟಿ. ಕೆ. ಗಂಗಿರೆಡ್ಡಿ.—ಟಿ. ಸಿ. ಹೆಚ್. ಪಾಸಾಗದೆ ಇರುವಂತಹವರ ಅರ್ಜಿಗಳಿಗೆ ಅವರನ್ನು ತೆಗೆದುಕೊಳ್ಳದೆ ಇರಲು ಕಾರಣವೇನು ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಎಸ್. ಎಸ್. ಎಲ್. ಸಿ. ಯಲ್ಲಿ ಪಾಸಾಗಿರುವವರ ಮಾರ್ಕ್ಸ್‌ಗಳು ಏನಿತ್ತೋ ಅದರ ಆಧಾರದ ಮೇಲೆ ಅವರನ್ನು ಆರಿಸಲಾಗಿದೆ.

ಶ್ರೀ ಟಿ. ಕೆ. ಗಂಗಿರೆಡ್ಡಿ.—ಕೋಲಾರ ತಾಲ್ಲೂಕಿನಿಂದ ಎಷ್ಟು ಜನರನ್ನು ಆರಿಸಲಾಗಿದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದರ ಇನ್‌ಫರ್‌ಮೇಷನ್ ಇಲ್ಲ. ಪ್ರತ್ಯೇಕ ಪ್ರಶ್ನೆ ಹಾಕಿದರೆ ಆಗ ವಿವರಗಳನ್ನು ಓದಿಸಿಕೊಡಲಾಗುತ್ತದೆ.

ಶ್ರೀ ಐ. ನಾರಾಯಣ ಗೌಡ.—ಕೋಲಾರ ಜಿಲ್ಲೆಯಲ್ಲಿ ಎಷ್ಟು ಜನರನ್ನು ಟೀಚರು ಕೆಲಸಗಳಿಗಾಗಿ ಆರಿಸಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಉತ್ತರದಲ್ಲೇ ವಿವರಗಳನ್ನು ಓದಿಸಲಾಗಿದೆ. ಮತ್ತು ವೇಕೆನ್ಸಿಗಳು ಇದ್ದ ಹಾಗೆಲ್ಲಾ ಇವರನ್ನು ಅಲ್ಲೆ ತುಂಬಲು ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಎಸ್. ಆರ್. ಷಣ್ಮುಗಂ.—ಇಲ್ಲಿ ಒಂದು ಟೀಚರ್ಸ್ ಟ್ರೇನಿಂಗ್ ಸ್ಕೂಲನ್ನು ತೆರೆಯುವುದಕ್ಕೆ ಏನು ಅಕ್ಷೇಪಣೆಗಳಿವೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಹೇಳಬಹುದು. ಇದರಲ್ಲಿ ಅದು ಬರುವುದಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಹುದ್ದೆಗಳಿಗೆ ನೇಮಕ ಮಾಡುವಾಗ ಕೋಲಾರದ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಗಳಿಗಿರುವ ಸೇಕಡಾವಾರಿನಂತೆ ಎಂದರೆ ಸೇಕಡ 15 ರಷ್ಟು ಪೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಮತ್ತು ಸೇಕಡಾ ಮೂರರಷ್ಟು ಪೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಇಲ್ಲೂ ಕೊಟ್ಟಿದ್ದೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅರ್ಜಿಗಳನ್ನು ಪರಿಶೀಲನೆ ಮಾಡುವಾಗ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ತೆಗೆದುಕೊಳ್ಳುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪಿ. ಎಸ್. ಸಿ. ಕಡೆಯಿಂದ ತೆಗೆದು ಇಂತಹ ನೇಮಕಗಳನ್ನು ಡಿ. ಎಲ್. ಆರ್. ಸಿ. ಕಡೆಗೆ ಕೊಡಲು ಕಾರಣಗಳೇನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆಯಾ ಜಿಲ್ಲೆಯಲ್ಲಿ ನೇಮಕಗಳನ್ನು ಮಾಡುವಾಗ ಆಯಾ ಜಿಲ್ಲೆಯಲ್ಲಿರುವ ಡಿ. ಎಲ್. ಆರ್. ಸಿ. ಕಮಿಟಿಗೆ ವಹಿಸಬೇಕೆಂದು ಸರಕಾರದ ಉದ್ದೇಶ. ಅದರಂತೆ ಇಲ್ಲೂ ಮಾಡಲಾಗಿದೆ.

Segihalla Project

62. Sri I. SOMASHEKARAPPA (Hosanagar).—

Will the Minister for Public Works be pleased to state :—

(*a*) whether the District Development Council, Shimoga has urged the Government to take up Segihalla Project in Shimoga Taluk, to benefit the drought stricken areas of Haranahalli and Kumsi Hoblies ;

(*b*) if so, whether the estimate for the said project has been prepared ;

(*c*) whether there is any proposal to include it in the IV Five Year Plan ?

†Indicates that the remarks or speeches have not been revised by the member concerned

Sri D. PARAMESWARAPPA (Deputy Minister for Major Irrigation and Electricity) [on behalf of SRI A. J. DODDAMETI (Minister of State for Minor Irrigation)].—

(*a*) Yes.

(*b*) The scheme is under investigation.

(*c*) Will be examined after the project report is finalised.

ಶ್ರೀ ಐ. ಸೋಮಶೇಖರಪ್ಪ.—ಸ್ವಾಮಿ, (ಇ) ಗೆ ಉತ್ತರವಾಗಿ ಯೋಜನಾ ವರದಿಯು ಅಂತಿಮವಾದ ನಂತರ ಇದನ್ನು ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ. ಹಾಗಾದರೆ ಎಷ್ಟು ದಿವಸದಲ್ಲಿ ಈ ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡಲಾಗುತ್ತದೆ ?

Sri D. PARAMESWARAPPA.—Within six months, the final report will be ready.

Stamp Papers

90. Sri S. JAYAPRAKASH SHETTI (Brahmavar).—

Will the Minister for Revenue be pleased to state :—

(*a*) whether it is a fact that there is shortage of stamp papers in the State;

(*b*) the action they propose to take, to meet the shortage ?

Sri H. V. KOUJALGI (Minister for Revenue).—

(*a*) and (*b*) when the Commissioner of Stamps visited some of the Taluk Offices and inspected the stock of stamp papers, the stock of stamp papers of lower value was found less and afterwards the Controller of Stamps has been requested to supply stamps as per the request of our officers.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ಸ್ವಾಮಿ, ಛಾಪಾ ಕಾಗದಗಳು ಕಡಿಮೆ ಇದ್ದುದು ಕಂಡುಬಂದಮೇಲೆ ಕಂಟ್ರೋಲರ್ ವಿಸಿಟ್ ಮಾಡಿ ಛಾಪಾ ಕಾಗದಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದೀರಿ. ಸ್ಟ್ಯಾಂಪ್ ಪೇಪರ್ ಇಲ್ಲ ಎಂದು 5–6 ಸಾರಿ ಟೆಲಿಗ್ರಾಂ ಕೊಟ್ಟು, ಎಕ್ಸ್‌ಪ್ರೆಸ್ ಲೆಟರ್ ಇವೆರ್ಲಾ ಬರೆದರೂ 3 ತಿಂಗಳಿನಿಂದಲೂ ಬರಲಿಲ್ಲ. ಹೀಗಾಗಿ ಕಡಿಮೆ ಬೆಲೆಯ ಸ್ಟ್ಯಾಂಪ್ ಪೇಪರ್ ಬ್ಲಾಕ್ ಮಾರ್ಕೆಟ್‌ನಲ್ಲಿ ಹೋಗುತ್ತಾ ಇದೆ. ಆದುದರಿಂದ ಕಡಿಮೆ ಬೆಲೆಯ ಸ್ಟ್ಯಾಂಪ್ ಪೇಪರನ್ನು ಕೂಡಲೇ ಸಿಕ್ಕುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಬ್ಲಾಕ್ ಮಾರ್ಕೆಟ್‌ನಲ್ಲಿ ಹೋಗುತ್ತಾ ಇದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಆದರೆ ಕೆಲವು ಕಾಲ ಕಡಿಮೆ ಬೆಲೆಯ ಸ್ಟ್ಯಾಂಪ್ ಪೇಪರ್ ಕಡಿಮೆ ಇತ್ತು. ಅದನ್ನು ಆಗಿಂದಾಗ್ಗೆ ಸರಿಪಡಿಸಿದ್ದೇವೆ.

Sri D. B. KALMANKAR.—May I know how many Taluk Offices were inspected and whether the stamps of lower denominations have been supplied to all Taluk Offices in abundance, Sir ?

Sri H. V. KOUJALGI.—Yes.

ಶ್ರೀ ಬಿ. ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಟ್ಯಾಂಪ್ ಪೇಪರ್ ಅಭಾವ ಇದೆ ಎಂದು ಅಲ್ಲಿನ ಜನರು ಟೆಲಿಗ್ರಾಂ ಕಳುಹಿಸಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ ?